ಆ) ಅವರುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 16

ಆ) ಪರಿಶಿಷ್ಟ ಜಾತಿ-ಇಲ್ಲ.

ಪರಿಶಿಷ್ಟ ವರ್ಗ-ಇಲ್ಲ.

ನೆಲಮಂಗಲ ತಾಲ್ಲೂಕಿನಲ್ಲಿ ಸರ್ಕಾರಿ ಸ್ಮಶಾನಗಳ ಒತ್ತುವರಿ

141 - ಶ್ರೀ ಆಂಜನಮೂರ್ತಿ (ನೆಲಮಂಗಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ತಾಲ್ಲೂಕು ಅದರಲ್ಲೂ ನೆಲಮಂಗಲ ಪಟ್ಟಣದಲ್ಲಿರುವ ಹರಿಜನ-ಗಿರಿಜನರಿಗೆ ಶವ ಸಂಸ್ಕಾರ ಮಾಡಲು ಸ್ಮಶಾನದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಟೌನ್‌ನಲ್ಲಿರುವ ಜಯನಗರ ಹಾಗೂ ವಿಶ್ವೇಶ್ವರಪುರದ ಹರಿಜನರಿಗೆ ಸೇರಿದ ಸ್ಮಶಾನವನ್ನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಸ್ಥಳಕ್ಕೆ ಹೋಗಲು ಖಾಸಗಿಯವರು ದಾರಿ ಜಾಗವನ್ನು ಸ್ಥಳೀಯರು ಪ್ರತಿಭಟಿಸಿದ್ದರೂ ಕೂಡ ಒತ್ತುವರಿ ಮಾಡಿರುವುದರಿಂದ ಸ್ಮಶಾನಕ್ಕೆ ಹೋಗಲು ಯಾವ ಕಡೆಯಿಂದ ದಾರಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರ್ಕಾರದವರು ಏನು ಕ್ರಮ ಕೈಗೊಂಡಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು):

ಅ) ಇಲ್ಲ.

ಆ) ಹೌದು.

ಇ) ಹೌದು, ಪಕ್ಕದ ಹಿಡುವಳಿ ಜಮೀನಿನವರು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಒತ್ತುವರಿದಾರರನ್ನು ಜಮೀನಿನಿಂದ ಹೊರದೂಡಿಸಿರುತ್ತದೆ.

ಜಯನಗರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಜಮೀನು ಕೊಟ್ಟಿರುವುದು.

192 - ಶ್ರೀ ಬಿ.ಟಿ. ಜಯಚಂದ್ರ(ಕಳ್ಳಂಬೆಳ್ಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರುಗಳಿಗೆ ನಿವೇಶನಕ್ಕಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಸರ್ಕಾರ ಜಮೀನುಗಳನ್ನು ವಶಪಡಿಸಿಕೊಳ್ಳಲು ಕ್ರಮ ಕೈಗೊಂಡಿದೆ ಮತ್ತು ಅದರ ಬೆಲೆಯನ್ನು ಸಹ ಪಡೆದಿರುವುದು ನಿಜವೇ?

ಆ) ವಿಶೇಷ ಭೂಸ್ವಾಧೀನಾಧಿಕಾರಿ ಬೆಂಗಳೂರು ಉಪ ವಿಭಾಗ ಇವರುಗಳು ಸಂಘದ ಕಾರ್ಯದರ್ಶಿಗಳಿಗೆ ಕಾಗದ ಬರೆದು ಸದರಿ ಜಮೀನಿನಲ್ಲಿ ಬಗರ್ ಹುಕುಂ ಕಟ್ಟಡಗಳು ತಲೆ ಎತ್ತಿದೆ ಅದರ ಬದಲು ಬೇರೆ ಜಾಗವನ್ನು ಸೂಚಿಸುವಂತೆ ಕೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಬದಲೀ ಜಮೀನು ಕೊಡಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?